## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 578 (668) |
| ಸದಸ್ಯರ ಹೆಸರು | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 09.03.2026 |
| ಉತ್ತರಿಸುವವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಂಡೀಪುರ ಮತ್ತು ನಾಗರಹೊಳೆ ಭಾಗದಲ್ಲಿ ಪ್ರವಾಸಿಗರು ಸುಗ್ಗಿ ಕಾಲದಲ್ಲೇ (Peak Season) ಸಫಾರಿ ನಿರ್ಬಂಧಿಸಿರುವುದರಿಂದ ರೆಸಾರ್ಟ್ ಗಳ ಬುಕ್ಕಿಂಗ್ ರದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ದಿನಾಂಕ: 07-11-2025 ರಿಂದ ಸಫಾರಿ ಚಟುವಟಿಕೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು, ದಿನಾಂಕ: 21.02.2026 ರಿಂದ ಸಫಾರಿ ಚಟುವಟಿಕೆಯನ್ನು ಹಂತ-ಹಂತವಾಗಿ ಷರತ್ತುಗೊಳಪಟ್ಟು ಪುನರಾರಂಭಿಸಲು ಅನುಮತಿ ನೀಡಲಾಗಿದೆ.<br><br>ಈ ಅವಧಿಯಲ್ಲಿ ಬಂಡೀಪುರ ಮತ್ತು ನಾಗರಹೊಳೆ ಭಾಗದ ರೆಸಾರ್ಟ್‌ಗಳ ಬುಕ್ಕಿಂಗ್ ಬಗ್ಗೆ ಇಲಾಖೆಗೆ ಯಾವುದೇ ಮಾಹಿತಿ ಇರುವುದಿಲ್ಲ. |
| ಆ) | ಅರಣ್ಯ ಇಲಾಖೆಯ ಈ ಅಕಾಲಿಕ ನಿರ್ಧಾರದಿಂದ ರೆಸಾರ್ಟ್ ಮಾಲೀಕರಿಗೆ ಸುಮಾರು ಶೇ.50 ರಷ್ಟು ಲಾಭದ ನಷ್ಟ ಉಂಟಾಗುತ್ತಿರುವುದು ನಿಜವೇ; | ಇದರ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಲಭ್ಯವಿರುವುದಿಲ್ಲ. |
| ಇ) | ಸಫಾರಿ ವಾಹನ ಚಾಲಕರು ಮತ್ತು ರೆಸಾರ್ಟ್ ನೌಕರರು ಕೆಲಸ ಕಳೆದುಕೊಂಡು ಬೀದಿಗೆ ಬರುತ್ತಿರುವುದನ್ನು ತಡೆಯಲು ಸರ್ಕಾರ ಯಾವ ಪರ್ಯಾಯ ಕ್ರಮ ಕೈಗೊಂಡಿದೆ: | ಸಫಾರಿ ನಿರ್ಬಂಧಿತ ಅವಧಿಯಲ್ಲಿ ಅರಣ್ಯ ಇಲಾಖೆಯ ಸಫಾರಿ ವಾಹನ ಚಾಲಕರುಗಳನ್ನು ಪರ್ಯಾಯವಾಗಿ ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗಿದ್ದು, ಎಂದಿನಂತೆ ಮಜೂರಿಯನ್ನು ಪಾವತಿಸಲಾಗಿರುತ್ತದೆ.<br><br>ರೆಸಾರ್ಟ್‌ಗಳಲ್ಲಿ ನೌಕರರನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದು ಅಥವಾ ಕೆಲಸದಿಂದ ತೆಗೆದು ಹಾಕುವುದು ಅರಣ್ಯ ಇಲಾಖೆಗೆ ಅನ್ವಯಿಸುವುದಿಲ್ಲ. |
| ಈ) | ಪ್ರವಾಸಿಗರು ಕರ್ನಾಟಕದ ಬದಲು ಕೇರಳ ಮತ್ತು ತಮಿಳುನಾಡಿನತ್ತ ಮುಖ ಮಾಡುತ್ತಿರುವುದರಿಂದ ರಾಜ್ಯದ ಪ್ರವಾಸೋದ್ಯಮಕ್ಕೆ ಆಗುತ್ತಿರುವ ನಷ್ಟವನ್ನು ಸರಿಪಡಿಸಲು ಈ ಕೂಡಲೇ ಸಫಾರಿ ಮೇಲಿನ ನಿರ್ಬಂಧ ಸಡಿಲಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ದಿನಾಂಕ: 21.02.2026 ರಲ್ಲಿ ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮ ಚಟುವಟಿಕೆಯನ್ನು ಹಂತ-ಹಂತವಾಗಿ ಪುನರಾರಂಭಿಸಲು ಷರತ್ತುಗಳಿಗೊಳಪಟ್ಟು ಈಗಾಗಲೇ ನಿರ್ದೇಶನ ನೀಡಲಾಗಿದೆ. |

**ಇ-ಸಂಖ್ಯೆ: ಅಪಜೀ 72 ಎಫ್‌ಡಬ್ಲ್ಯೂಎಲ್ 2026**

(ಈಶ್ವರ ಬಿ. ಖಂಡ್ರೆ)
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು